**ದಿನಾಂಕ 25.05.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**
ಮುಂದುವರೆದ **ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

13. ಸಾಕ್ಷಿ ನ್ಯಾಯಾಲಯದ ಮುಂದಿರುವ ಉಳಿದ 5 ಪ್ಯಾಕೇಟ್ ಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಇಲಿಗಳು ಕಚ್ಚಿ ತಿಂದಿದ್ದು, 2 ಪ್ಯಾಕೇಟ್‌ಗಳಲ್ಲಿ ಸ್ವಲ್ಪ ಉಳಿದಿದ್ದು, ಇನ್ನುಳಿದ 3 ಪ್ಯಾಕೇಟ್ ಗಳಲ್ಲಿ ಯಾವುದೇ ಗಾಂಜಾ ಮಾಲು ಕಂಡು ಬಂದಿರುವುದಿಲ್ಲ. ಸದರಿ 5 ಪ್ಯಾಕೇಟ್ ಗಳನ್ನು **ಮು.ಮಾ. 13 ರಿಂದ 17** ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರಿರುವ 1 ಮತ್ತು 4 ನೇ ಆರೋಪಿತರನ್ನು ಮತ್ತು ವಿಸಿ ಟಿವಿಯಲ್ಲಿ ಹಾಜರು ಪಡಿಸಿರುವ 2 ಮತ್ತು 3 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲುಃ 2 ನೇ ಆರೋಪಿ ಪರ ವಕೀಲರಾದ ಶ್ರೀ ಎನ್ ಎನ್ ಆರ್ ರವರಿಂದ**

14. ಚಿಕ್ಕಬಳ್ಳಾಪುರದಲ್ಲಿ 2007 ರಿಂದ ಸಂಚಾರಿ ಪೊಲೀಸ್ ಠಾಣೆ ಅಸ್ತಿತ್ವದಲ್ಲಿದೆ ಎಂದರೆ ಸರಿ. ಘಟನೆ ನಡೆದ ದಿನ ಸಂಚಾರಿ ವಾಹನಗಳನ್ನು ಪರಿಶೀಲಿಸಿ, ಸುಮಾರು 25 ವಾಹನ ಚಾಲಕರಿಗೆ ದಂಡ ವಿಧಿಸಿರುತ್ತೇವೆ. ಸದರಿ ದಂಡದ ಮೊತ್ತ ಇಂದು ನನಗೆ ನೆನಪಿಲ್ಲ. ಈ ಬಗ್ಗೆ ದಾಳಿ ಪಂಚನಾಮೆಯಲ್ಲಿ ನಮೂದಿಲ್ಲ ಎಂದರೆ ಸರಿ. ಘಟನಾ ಸ್ಥಳದಲ್ಲಿ ಎಸ್ ಪಿ ಕಛೇರಿಗೆ ಸುಮಾರು 2 ಕಿ.ಮೀ ಅಂತರವಿತ್ತು ಎಂದರೆ ಸಾಕ್ಷಿಯು ಸುಮಾರು 4-5 ಕಿ.ಮೀ ಅಂತರವಿತ್ತು ಎನ್ನುತ್ತಾರೆ.

15. ವಾಹನಗಳ ಪರಿಶೀಲನೆ ಕಾಲಕ್ಕೆ ಮಾದಕ ವಸ್ತು ಸಾಗಾಣೆ ಬಗ್ಗೆ ತಿಳಿದು ಬಂದಿದ್ದು, ಈ ಬಗ್ಗೆ ನನ್ನ ಮೇಲಾಧಿಕಾರಿಗಳಿಗೆ ವಿಚಾರ ತಿಳಿಸಿರುತ್ತೇನೆ. ಸದರಿ ವಿಚಾರವನ್ನು ಮೌಖಿಕವಾಗಿ ತಿಳಿಸಿರುತ್ತೇನೆ. ನನ್ನ ಮೇಲಾಧಿಕಾರಿಗಳಿಂದ ಸದರಿ ಮಾದಕ ವಸ್ತುವನ್ನು ಜಪ್ತು ಪಡಿಸಲು ಅನುಮತಿ ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಕಾನೂನು ಪ್ರಕಾರ ನನಗೆ ಅಧಿಕಾರವಿದ್ದು, ಅನುಮತಿ ಪಡೆಯುವ ಅವಶ್ಯಕತೆ ಇಲ್ಲ

ಎನ್ನುತ್ತಾರೆ. ಈ ಪ್ರಕರಣದಲ್ಲಿ ನಾನು ಪಿರ್ಯಾದುದಾರ ಎಂದರೆ ಸರಿ. ಯಾವುದೆ ಮಾದಕ ವಸ್ತುವನ್ನು ಯಾವುದೇ ವ್ಯಕ್ತಿಯಿಂದ ಅಮಾನತ್ತು ಪಡಿಸಿಕೊಳ್ಳುವ ಕಾಲಕ್ಕೆ ಕಲಂ 50 NDPS ಕಾಯಿದೆಯಡಿ ಹೇಳಿರುವ ಅಂಶಗಳನ್ನು ಪಾಲಿಸಬೇಕು ಎನ್ನುವುದು ನನಗೆ ತಿಳಿದಿದೆ ಎಂದರೆ ಸರಿ. ಆ ರೀತಿ ಆರೋಪಿ ಅಂಗ ಶೋಧನೆಯನ್ನು ಯಾರಾದರೂ ನ್ಯಾಯಾಧೀಶರ ಮುಂದೆ ಅಥವಾ ಗೆಜೆಟೆಡ್ ಅಧಿಕಾರಿಯವರ ಮುಂದೆ ಮಾಡಬೇಕು ಎಂದು ಸರಿ. ಗೆಜೆಟೆಡ್ ಅಧಿಕಾರಿಯನ್ನು ಅಥವಾ ನ್ಯಾಯಾಧೀಶರನ್ನು ಕರೆಸಲು ಪ್ರಯತ್ನಿದ್ದೀರಾ ಎಂದರೆ ಸಾಕ್ಷಿಯು ನಾನೇ ಗೆಜೆಟೆಡ್ ಅಧಿಕಾರಿಯಾದ ಕಾರಣ ಮತ್ತೊಬ್ಬ ಗೆಜೆಟೆಡ್ ಅಧಿಕಾರಿಯನ್ನು ಕರೆಯಬೇಕಾಗಿರುವುದಿಲ್ಲ ಎನ್ನುತ್ತಾರೆ.

16. ಆರೋಪಿ ಅಂಗ ಶೋಧನೆ ಮಾಡುವ ಕಲಾಕ್ಕೆ ಪ್ರಶ್ನಾವಳಿಗಳನ್ನು ತಯಾರಿಸಿ ಆರೋಪಿಗೆ ಜಾರಿ ಮಾಡಿದ್ದೀರಾ ಎಂದರೆ ಸಾಕ್ಷಿಯು ಆರೋಪಿಗಳನ್ನು ಉದ್ದೇಶಿಸಿ ನಿಮ್ಮ ಅಂಗ ಶೋಧನೆಯನ್ನು ನ್ಯಾಯಾಧೀಶರ ಮುಂದೆ ಮಾಡಿಸಬೇಕೆ ಅಥವಾ ಗೆಜೆಟೆಡ್ ಅಧಿಕಾರಿಯಾದ ನಾನೇ ಮಾಡಬಹುದೇ ಎಂದು ಮೌಖಿಕವಾಗಿ ವಿಚಾರಿಸಿದ್ದು,ಅದಕ್ಕೆ ಆರೋಪಿತರು ಒಪ್ಪಿರುವುದಾಗಿ ನುಡಿಯುತ್ತಾರೆ. ಕಲಂ 50 ರಡಿ ಅಂಗ ಶೋಧನೆ ಪ್ರಶ್ನಾವಳಿಯನ್ನು ಕಡ್ಡಾಯವಾಗಿ ಲಿಖಿತವಾಗಿ ಜರುಗಿಸಿಬೇಕು ಎಂದರೆ ಸರಿ. ಲಿಖಿತ ಪ್ರಶ್ನಾವಳಿಗಳನ್ನು ತಯಾರಿಸಿ, ಒಬ್ಬೊಬ್ಬ ಆರೋಪಿಗೂ ಪ್ರತ್ಯೇಕವಾಗಿ ವಿಚಾರ ಮಾಡಿ ಅವರ ಒಪ್ಪಿಗೆಯನ್ನು ಲಿಖಿತವಾಗಿ ಪಡೆಯಬೇಕು ಎಂದರೆ ಸರಿ. ನಾನು ಹೇಳುವಂತೆ ದಿ.12.08.2019 ರಂದು ಯಾವುದೇ ಪ್ರಕರಣ ನಡೆಯದ ಕಾರಣ ಹಾಗೂ ಆರೋಪಿಗಳನ್ನು ಅಂಗ ಶೋಧನೆ ಮಾಡಿ, ಮಾಲನ್ನು ಜಪ್ತು ಪಡಿಸದ ಕಾರಣ ಕಲಂ 50 ರಡಿ ಲಿಖಿತ ಪ್ರಶ್ನಾವಳಿಗಳನ್ನು ತಯಾರಿಸಿ ಆರೋಪಿಗಳ ಒಪ್ಪಿಗೆ ಪಡೆದಿಲ್ಲ ಎಂದರೆ ಸರಿಯಲ್ಲ.

17. ಪಂಚನಾಮೆ ಕಾಲಕ್ಕೆ ತನಿಖೆ ಮುಂದುವರೆಸುವ ಸಲುವಾಗಿ records of reasons ಅನ್ನು ತಯಾರಿಸಿಲ್ಲ ಎಂದರೆ ಸರಿ. ನ್ಯಾಯಾಲಯದಿಂದ ಶೋಧನಾ ವಾರೆಂಟ್ ಅನ್ನು ಪಡೆದಿಲ್ಲ ಎಂದರೆ ಸರಿ. ಪಂಚನಾಮೆ ಕಾಲಕ್ಕೆ ಆರೋಪಿಗಳಿಂದ ಜಪ್ತು ಪಡಿಸಿದೆ ಎಂದು ಹೇಳಲಾದ 4 ಮೊಬೈಲ್ ಗಳು ಚಾಲ್ತಿಯಲ್ಲಿದ್ದವು. ಸದರಿ ಮೊಬೈಲ್ ಗಳಲ್ಲಿ ಬಳಕೆಯಲ್ಲಿದ್ದ ಸಿಮ್ ಕಾರ್ಡ್ ನಂಬರ್ ಗಳನ್ನು ಪಂಚನಾಮೆಯಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ಸದರಿ ಮೊಬೈಲ್ ಸಿಮ್ ಕಾರ್ಡ್ ನಂಬರ್ ಗಳು ಯಾರ ಹೆಸರಿನಲ್ಲಿದ್ದವು ಎನ್ನುವ ಬಗ್ಗೆ ಖಚಿತ ಪಡಿಸಿಕೊಂಡಿದ್ದೀರಾ ಎಂದರೆ ಸಾಕ್ಷಿಯು ಅದನ್ನು ಮುಂದಿನ ತನಿಖಾಧಿಕಾರಿಗಳು ಮಾಡಬೇಕು ಎನ್ನುತ್ತಾರೆ. ಸದರಿ ಮೊಬೈಲ್ ನ ಸಿಮ್ ಕಾರ್ಡ್ ನಂಬರ್ ಗಳಿಂದ ಬೇರೆ ಯಾರು ಯಾರಿಗೆ ಹೊರ ಮತ್ತು ಒಳ ಕರೆಗಳು ಮಾಡಿದ್ದರು ಎನ್ನುವ ಬಗ್ಗೆ ನಾನು ಪರಿಶೀಲನೆ ಮಾಡಿರುವುದಿಲ್ಲ.

18. ನಾನು ಈ ಪ್ರಕರಣದಲ್ಲಿ ಜಪ್ತು ಪಡಿಸಿದೆ ಎಂದು ಹೇಳಲಾದ ರೂ.2,200/- ಗಳ ಮುಖ ಬೆಲೆ, ಕರೆನ್ಸಿ ನೋಟ್‌ಗಳ ನಂಬರ್ ಗಳನ್ನು ಪಂಚನಾಮೆಯಲ್ಲಿ ನಮೂದಿಸಿಲ್ಲ ಎಂದರೆ ಸಾಕ್ಷಿಯು ಮುಖಬೆಲೆಯನ್ನು ಸಾವಿರದ ಎರಡು ನೋಟುಗಳು ಮತ್ತು ನೂರು ರೂಪಾಯಿಗಳ ಎರಡು ನೋಟುಗಳಾಗಿ ನಮೂದಿಸಿದ್ದು, ಕರೆನ್ಸಿ ನೋಟ್‌ಗಳ ನಂಬರ್ ಗಳನ್ನು ನಮೂದಿಸಿಲ್ಲ ಎನ್ನುತ್ತಾರೆ. ನಿಪಿ-2 ರ ಯಾವುದೇ ಫೋಟೋಗಳಲ್ಲಿಯೂ ಸಹ ಗಾಂಜಾ ಸೊಪ್ಪು ಇರುವ ಬಗ್ಗೆ ಕಂಡು ಬರುವುದಿಲ್ಲ ಎಂದರೆ ಸಾಕ್ಷಿಯು ಫೋಟೋಗಳಲ್ಲಿ ಕಂಡು ಬರುವ ಪ್ಯಾಕೇಟ್ ಗಳಲ್ಲಿ ಗಾಂಜಾ ಸೊಪ್ಪು ಇರುವುದಾಗಿ ನುಡಿಯುತ್ತಾರೆ. ಸ್ಥಳದಲ್ಲಿ ಮಾದರಿಗಾಗಿ ಪ್ರತ್ಯೇಕಪಡಿಸಿದ ಗಾಂಜಾ ಸೊಪ್ಪಾಗಲೀ ಅಥವಾ ಪ್ಯಾಕೇಟ್‌ಗಳಾಗಲೀ ಕಂಡು ಬರುವುದಿಲ್ಲ ಎಂದರೆ ಸರಿ. ಅದೇ ರೀತಿ ಸದರಿ ಫೋಟೋಗಳಲ್ಲಿ ಆರೋಪಿಗಳಿಂದ ಹಣ ಹಾಗೂ ಮೊಬೈಲ್ ಗಳನ್ನು ವಶಪಡಿಸಿಕೊಳ್ಳುವುದು ಕಂಡು ಬರುವುದಿಲ್ಲ ಎಂದರೆ ಸರಿ. ಆರೋಪಿಗಳಿಂದ ಹಣ

ಹಾಗೂ ಮೊಬೈಲ್‌ಗಳನ್ನು ವಶಪಡಿಸಿಕೊಳ್ಳದ ಕಾರಣ ಅಂತಹ ಯಾವುದೇ ಫೋಟೋಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಸದರಿ ಹಣ, ಮೊಬೈಲ್ ಗಳಿಗೂ ಹಾಗೂ ಆರೋಪಿಗಳಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಸದರಿ ಫೋಟೋಗಳಲ್ಲಿ ಆಟೋದ ನಂಬರ್ ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ. ಯಾವ ಯಾವ ಪ್ಯಾಕೇಟ್ ನಿಂದ ಎಷ್ಟೆಷ್ಟು ಗಾಂಜಾವನ್ನು ಮಾದರಿಗಾಗಿ ತೆಗೆಯಲಾಗಿದೆ ಎಂದು ನಿಪಿ-1 ರ ಪಂಚನಾಮೆಯಲ್ಲಿ ನಮೂದಿಸಿಲ್ಲ ಎಂದರೆ ಸರಿ.

19. ಆರೋಪಿಗಳಿಗೂ, ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ, ಪಂಚನಾಮೆಯನ್ನು ಸ್ಥಳದಲ್ಲಿ ಜರುಗಿಸಿಲ್ಲ ಮತ್ತು ಯಾವುದೇ ವಸ್ತುವನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮು.ಮಾ.9 ರಿಂದ 17 ಅನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಮು.ಮಾ.9 ರಿಂದ 17 ಕ್ಕೂ, ಆರೋಪಿಗಳಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಆರೋಪಿಗಳನ್ನು ಈ ಪ್ರಕರಣದಲ್ಲಿ ಸಿಲುಕಿಸಲಾಗಿದೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ 1, 3 ಮತ್ತು 4 ನೇ ಆರೋಪಿ ಪರ ವಕೀಲರಾದ ಶ್ರೀ ಆರ್.ಎನ್.ಆರ್, ಶ್ರೀ ಎನ್. ಆರ್ ರವರಿಂದ**

ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿಯುತ್ತಾರೆ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-
**(ಟಿ. ಪಿ. ರಾಮಲಿಂಗೇ ಗೌಡ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.